ಬೆಂಗಳೂರು ಗ್ರಾಮಾಂತರ ಹಾಗೂ ನಗರ ಜಿಲ್ಲೆಯಲ್ಲಿಯ ಸಾರಾಯಿ ಗುತ್ತಿಗೆದಾರರ ಬಗ್ಗೆ.

2243(3016)

ಶ್ರೀ ಕೃಷ್ಣಪ್ಪ.ವಿ.(ದೊಡ್ಡಬಳ್ಳಾಪುರ): ಮಾನ್ಯ ಅಬಕಾರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಗ್ರಾಮಾಂತರ ಮತ್ತು ನಗರ ಜಿಲ್ಲೆಯಲ್ಲಿನ ಅರಾಕ್ ಗುತ್ತಿಗೆದಾರರು ಯಾರು ಯಾರು?

ಆ) ಅರಾಕ್ ಮಾರಾಟ ಮಾಡಲು ಸಬ್ ಏಜೆನ್ಸಿಗಳನ್ನು ನೇಮಿಸುವ ಕ್ರಮವೇನು(ನಿಯಮಾವಳಿಗಳನ್ನು ನಮೂದಿಸುವುದು)

ಇ) ಸಬ್ ಏಜೆನ್ಸಿಗಳಲ್ಲದೆ ಇತರರು ಯಾವುದೇ ಅನುಮತಿಯನ್ನು ಪಡೆಯದೇ ಅರಾಕ್ ಮಾರಾಟವನ್ನು ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದರೆ ಯಾರು ಯಾರ ವಿರುದ್ಧ ಏನೇನು ಕ್ರಮವನ್ನು ಕೈಗೊಳ್ಳಲಾಗಿದೆ?

ಶ್ರೀ ಎಂ.ಎಂ.ನಾಣಯ್ಯ (ಅಬಕಾರಿ ರಾಜ್ಯಸಚಿವರು):

ಅ) ಬೆಂಗಳೂರು ಗ್ರಾಮಾಂತರ ಮತ್ತು ನಗರ ಜಿಲ್ಲೆಯಲ್ಲಿನ ಅರಾಕ್ ಗುತ್ತಿಗೆದಾರರ ವಿವರ ಈ ಕೆಳಗಿನಂತಿದೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆ:

ಕ್ರ. ಸಂ.	ತಾಲ್ಲೂಕು	ಗುತ್ತಿಗೆದಾರರ ಹೆಸರು
1.	ರಾಮನಗರ	ಶ್ರೀ ಎನ್.ಶಂಕರ್
2.	ಚನ್ನಪಟ್ಟಣ	ಶ್ರೀ ಎನ್.ಶಂಕರ್
3.	ಕನಕಪುರ	ಶ್ರೀ ಎನ್.ಶಂಕರ್
4.	ನೆಲಮಂಗಲ	ಶ್ರೀ ಎನ್.ಶಂಕರ್
5.	ದೇವನಹಳ್ಳಿ	ಮೆ: ಎಸ್.ಎಲ್.ಎನ್.ಡಿಸ್ಟಿಲರಿ ಪ್ರೈ. ಲಿ.
6.	ದೊಡ್ಡಬಳ್ಳಾಪುರ	ಶ್ರೀ ಹೆಚ್.ಎನ್.ಚಿಕ್ಕಣ್ಣ

7.	ಮಾಗಡಿ	ಮೆ: ರಂಗನಾಥ ಎಂಟರ್‌ಪ್ರೈಸಸ್
8.	ಹೊಸಕೋಟೆ	ಶ್ರೀ ಡಿ. ಪುಟ್ಟಸ್ವಾಮಿ

ಬೆಂಗಳೂರು ನಗರ ಜಿಲ್ಲೆ :

1.	ಬೆಂಗಳೂರು ನಗರ ಜಿಲ್ಲೆ	ಶ್ರೀ ಡಿ. ಪುಟ್ಟಸ್ವಾಮಿ.

ಆ) ಅರಾಕ್ ಗುತ್ತಿಗದಾರನು ಗುತ್ತಿಗೆಯನ್ನು ಕರ್ನಾಟಕ ಅಬಕಾರಿ ಕಾಯ್ದೆಯ ಸೆಕ್ಷನ್ 17ರ ಪ್ರಕಾರ ಜಿಲ್ಲಾಧಿಕಾರಿಗಳ ಅನುಮೋದನೆ ಪಡೆದು ಸಬ್ ಲೀಸ್ ನೀಡಲು ಅವಕಾಶ ಇರುತ್ತದೆ.

ಇ) ಇಲ್ಲ.

ಉದ್ಭವಿಸುವುದಿಲ್ಲ-

ದೊಡ್ಡಬಳ್ಳಾಪುರ ಕೈಗಾರಿಕಾ ಪ್ರದೇಶದಲ್ಲಿ ಕಾರ್ಯನಿರ್ವಹಿಸುವ ಕಾರ್ಮಿಕರ ಬಗ್ಗೆ.

2244(3017)

ಶ್ರೀ ಪಿ.ಕೃಷ್ಣಪ್ಪ(ದೊಡ್ಡಬಳ್ಳಾಪುರ): ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಸಂಪನ್ಮೂಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಆ) ದೊಡ್ಡಬಳ್ಳಾಪುರ ಕೈಗಾರಿಕಾ ಪ್ರದೇಶದಲ್ಲಿರುವ ಕೈಗಾರಿಕೆಗಳಲ್ಲಿ ಎಷ್ಟು ಜನ ಕಾರ್ಮಿಕರು ಕಾರ್ಯನಿರ್ವಹಿಸುತ್ತಿದ್ದಾರೆ?

ಆ) ತಾಲ್ಲೂಕಿನವರು (ಸ್ಥಳೀಯರು)ಎಷ್ಟು ಜನ ಬೇರೆ ಬೇರೆ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ?

ಇ) ಭೂಮಿಯನ್ನು ಕಳೆದುಕೊಂಡವರಲ್ಲಿ ಎಷ್ಟು ಜನರಿಗೆ ಕೆಲಸವನ್ನು ನೀಡಲಾಗಿದೆ.?

ಈ) ಹೊರಗಿನವರು ಎಷ್ಟು ಜನ ಕೆಲಸಗಾರರಿದ್ದಾರೆ? (ರಾಜ್ಯ ಮತ್ತು ಹೊರ ರಾಜ್ಯದವರು)

ಶ್ರೀ ಆರ್.ಪಿ.ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ